# ಎಂಎಸ್ಐಎಲ್ ಚಿಟ್ಸ್

## ಮಧ್ಯಮವರ್ಗದ ಜನರ ಸುರಕ್ಷಿತ ಹೂಡಿಕೆಗೆ ಜನಸ್ನೇಹಿ ಚಿಟ್‌ಫಂಡ್ ಸಂಸ್ಥೆ ಅಭಿವೃದ್ಧಿಯತ್ತ ಯಶಸ್ವಿ ದಾಪುಗಾಲು




ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (MSIL) ಇದು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಸಂಸ್ಥೆಯಾಗಿ 1966 ರಲ್ಲಿ ಸ್ಥಾಪನೆಯಾಯಿತು. (MSIL) ವಾಣಿಜ್ಯ ಸಂಸ್ಥೆಯಾಗಿ ಕಳೆದ ಐದು ದಶಕಗಳಿಂದ ಹಲವಾರು ವೈವಿಧ್ಯಮಯ ವ್ಯವಹಾರಗಳನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿವಿದ ಬಗೆಯ ನೋಟ್ ಪುಸ್ತಕಗಳು ಮತ್ತು ಶಾಲಾ ಸಾಮಾಗ್ರಿಗಳನ್ನು ಕಡಿಮೆ ದರದಲ್ಲಿ ಒದಗಿಸಿ ವಿದ್ಯಾರ್ಥಿಗಳಿಗೆ ನೆಚ್ಚಿನ ನೋಟ್ ಪುಸ್ತಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರೊಂದಿಗೆ ಕೈಗಾರಿಕೋತ್ಪನ್ನ ವಸ್ತುಗಳಾದ ಸೋಲಾರ್ ವಾಟರ್ ಹೀಟರ್ ಮತ್ತು ವಾಟರ್ ಪ್ಯೂರಿಫೈಯರಗಳನ್ನು ಮಾರುಕಟ್ಟೆಗೆ ಯಶಸ್ವಿಯಾಗಿ ಪರಿಚಯಿಸಿ ಉತ್ತಮ ಮಾರಾಟವನ್ನು ಮಾಡಲಾಗುತ್ತಿದೆ. ಪ್ರವಾಸ ಮತ್ತು ಪ್ರಯಾಣ ವಿಭಾಗದ ಮೂಲಕ ಟೂರ್ ಪ್ಯಾಕೇಜ್‌ಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಂಸ್ಥೆಯು ರಾಜ್ಯಾದ್ಯಂತ ಚಿಲ್ಲರೆ ಮಧ್ಯ ಮಾರಾಟದ ಮಳಿಗೆಗಳನ್ನು ಹೊಂದಿದ್ದು ಗ್ರಾಹಕರಿಗೆ ಎಂ. ಆರ್. ಪಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಸಾಮಾನ್ಯ ಜನರಲ್ಲಿ ಕೂಡಿಕೆಯ ಮನೋಭಾವನೆಯನ್ನು ವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಸಂಸ್ಥೆಯು ಚಿಟ್ ಫಂಡ್ಸ್ ವಿಭಾಗದ ಮೂಲಕ ರಾಜ್ಯಾದ್ಯಂತ ಶಾಖಾ ಕಛೇರಿಗಳನ್ನು ಹೊಂದಿದ್ದು ಸಾರ್ವಜನಿಕರಿಗೆ ಸೇವೆ ಸಲ್ಲಿಸುವುದರೊಂದಿಗೆ ಅನೇಕ ವಾಣಿಜ್ಯ ವ್ಯವಹಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ದಾಪುಗಾಲಿಡುತ್ತಾ ಗ್ರಾಹಕರಿಗೆ ಅತ್ಯುತ್ತಮ ಸೇವೆಯನ್ನು ಒದಗಿಸಿ ಸಾರ್ವಜನಿಕ ರಂಗದಲ್ಲಿ ಜನಪ್ರಿಯತೆಯನ್ನು ಗಳಿಸಿರುವ ಹಾಗೂ ಹೆಗ್ಗಳಿಕೆಗೆ ಪಾತ್ರರಾಗಿರುವ ಪ್ರಮುಖ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದೆ.

ಸುರಕ್ಷಿತ ಹೂಡಿಕೆ ತಕ್ಷಣ ನೆರವಿಗೆ (invest safety borrow Easily) ಎಂಬ ಗ್ರಾಹಕರ ಪರ ಕಾಳಜಿಯಿಂದ ಸಂಸ್ಥೆಯು ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಎಲ್ಲಾ ವರ್ಗದವರಿಗೆ ಅದರಲ್ಲೂ ವಿಶೇಷವಾಗಿ ಮಧ್ಯಮವರ್ಗದ ಜನರನ್ನು ಆಕರ್ಷಿಸಿ ಕೂಡಿಕೆಯ ಮನೋಭಾವ ಬೆಳೆಸುವ ದೃಷ್ಟಿಯಿಂದ ಚಿಟ್ ಫಂಡ್ಸ್ ವಿಭಾಗವನ್ನು 2005 ರಲ್ಲಿ ಫ್ರಾರಂಬಿಸಿದ ಸಂಸ್ದೆಯು ಹಲವಾರು ವಿನೂತನ ಚಿಟ್ ಗುಂಪಿನ ಯೋಜನೆಗಳನ್ನು ಪರಿಚಯಿಸಿ ಯಶಸ್ವಿಯಾಗಿದೆ.

ಎಂ. ಎಸ್ ಐ.ಎಲ್ ಸಂಸ್ಥೆಯು ಈಗಾಗಲೇ 22 ಚಿಟ್ ಫಂಡ್ಸ್ ಶಾಖೆಗಳನ್ನು ಗ್ರಾಹಕರಿಗೆ ಅತ್ಯುತ್ತಮ ಸೇವೆಯನ್ನು ಒದಗಿಸುವ ಸಲುವಾಗಿ ಇನ್ನೆರಡು ನೂತನ ಶಾಖಾ ಕಛೇರಿಗಳನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಆರಂಭಿಸಿದೆ. (MSIL) ಚಿಟ್ ಫಂಡ್ಸ್ ವಿಶ್ವಾಸಾರ್ಹತೆ, ನಂಬಿಕೆ, ಪಾರದರ್ಶಕತೆಗೆ ಹೆಸರು ವಾಸಿಯಾಗಿರುವ ಸಂಸ್ಥೆಯಾಗಿ ಪ್ರಸ್ತುತ ಸುಮಾರು 25,000 ದಷ್ಟು ಸದಸ್ಯತ್ವವನ್ನು ಹೊಂದಿದ್ದು ಸುಮಾರು 236 ಕೋಟಿ ರೂ ಗಳಷ್ಟು ವಾರ್ಷಿಕ ಚಿಟ್ ವ್ಯವಹಾರದ ವಹಿವಾಟನ್ನು ಹೊಂದಿದೆ. ಪ್ರತಿಯೊಂದು ಚೀಟಿಯ ಗುಂಪುಗಳಲ್ಲಿ ರೂ 50 ಸಾವಿರದಿಂದ ಫ್ರಾರಂಭವಾಗಿ ರೂ 50 ಲಕ್ಷದ ವರೆಗೆ ಚೀಟಿಯ ಮೊತ್ತವನ್ನು ಹೊಂದಿದ್ದು. ಎಲ್ಲಾ ವರ್ಗದ ಜನರ ಬೆಡಿಕೆಗೆ ಅನುಗುಣವಾಗಿ ಚೀಟಿಯ ಗುಂಪನ್ನು ರೂಪಿಸಲಾಗಿದೆ. ಇದರೊಂದಿಗೆ ದೀರ್ಘಾವಧಿ ಚೀಟಿ ಗುಂಪುಗಳನ್ನು ಸಹ ಹೊಂದಿದ್ದು ಮಾಸಿಕ ಕಂತು ರೂ 1,000/– ದಿಂದ ರೂ.25,000/– ವರೆಗೆ ಮತ್ತು ಚೀಟಿಯ ಮೊತ್ತ 1 ಲಕ್ಷದಿಂದ 25 ಲಕ್ಷದವರೆಗೆ ಇರುತ್ತದೆ. ಈ ಗುಂಪಿನ ಚೀಟಿಗಳ ಮರು ಪಾವತಿ ಅವಧಿಯು 100 ತಿಂಗಳಿದ್ದು ( 8 ವರ್ಷ 4 ತಿಂಗಳು ) ಚಂದಾದಾರರು ಹಣ ಮರುಪಾವತಿಸಲು ಅನುಕೂಲ ಹಾಗೂ ಸಹಕಾರಿಯಾಗಿರುತ್ತದೆ.

ಸಂಸ್ಥೆಯ ಚೀಟಿಯ ಸದಸ್ಯತ್ವ ಪಡೆಯಲು ಅಥವಾ ನೊಂದಾಯಿಸಲು ಯಾವುದೇ ರೀತಿಯ ಅರ್ಜಿ ಸಲ್ಲಿಕೆಯ ಶುಲ್ಕವಿರುವುದಿಲ್ಲ. ಪ್ರತಿಯೊಂದು ಚಿಟ್‌ನ ಲಾಭಾಂಶ ಗಳಿಕೆಯು 2ನೇ ಕಂತಿನಿಂದ ಪ್ರಾರಂಭವಾಗಿ ಬಹುಮಾನಿತ ಮತ್ತು ಬಹುಮಾನಿತರಲ್ಲದ ಎಲ್ಲಾ ಚಂದಾದಾರರು ಸಹ ಸದರಿ ಲಾಭಾಂಶವನ್ನು ಪಡೆಯಲು ಅರ್ಹರಾಗಿರುತ್ತಾರೆ.

ಇಂದಿನ ಹಣ ಕಾಸಿನ ಮಾರು ಕಟ್ಟೆಯು ಅನಿಶ್ಚಿತತೆಯಿಂದ ಕೂಡಿದ್ದು ಗ್ರಾಹಕರು ಸಂಪೂರ್ಣವಾಗಿ ಗೊಂದಲದಲ್ಲಿರುವ ಪ್ರಸಕ್ತ ಸನ್ನಿವೇಶದಲ್ಲಿ ಇತರೇ ಮಾರುಕಟ್ಟೆಗೆ ಹೋಲಿಸಿದರೆ ಎಂ.ಎಸ್.ಐ.ಎಲ್ ಚಿಟ್ ನ ಹೂಡಿಕೆಯಲ್ಲಿ ಹೆಚ್ಚು ಲಾಭಾಂಶ ನೀಡುವ ಯೋಜನೆಯಾಗಿ ಜನಪ್ರಿಯವಾಗಿದೆ. ಕೌಟುಂಬಿಕ ದೀರ್ಘಾವಧಿ ಹಣಕಾಸಿನ ಅಗತ್ಯಗಳನ್ನು ಪೂರೈಸಲು ವೈಯಕ್ತಿಕ ಸಾಲ ತೆಗೆದುಕೊಳ್ಳುವವರಿಗೆ ಬಹಳಷ್ಟು ಅನುಕೂಲವಾಗಿದ್ದು. ಒಳ್ಳೆಯ ಪರ್ಯಾಯ ಹಣಕಾಸಿನ ಯೋಜನೆಯಾಗಿದೆ. ಎಂ. ಎಸ್. ಐ. ಎಲ್ ಸಂಪೂರ್ಣವಾಗಿ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿದ್ದು ಚಿಟ್ ನಲ್ಲಿ ಹಣ ತೊಡಗಿಸುವ ಪ್ರತಿಯೊಬ್ಬ ಗ್ರಾಹಕರಿಗೂ ಸೂಕ್ತ ಭದ್ರತೆ ಒದಗಿಸುವ ಸಲುವಾಗಿ ಸರ್ಕಾರಿ ಚಿಟ್ ಫಂಡ್ ಕಾಯ್ದೆ 1982 ಹಾಗೂ ಚೀಟಿ ನಿಧಿ ನಿಯಮಗಳು 1983ರ ನಿಯಮಗಳನ್ವಯ ಚಿಟ್ ಫಂಢ್ ವ್ಯವಹಾರವನ್ನು ಕಟ್ಟು ನಿಟ್ಟಾಗಿ ಪಾರದರ್ಶಕದಿಂದ ಪಾಲಿಸಲಾಗುತ್ತಿದೆ. ಸಂಸ್ಥೆಯಲ್ಲಿನ ಚಿಟ್ ಫಂಡ್ ಚಟುವಟಿಕೆ ಮತ್ತು ನಿಯಮಗಳ ಪರಿಪಾಲನೆ ಮತ್ತು ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಸಹಕಾರ ಸಂಘಗಳ ಅಪರ ನಿಬಂಧಕರನ್ನು ನಿಯೋಜಿಸಿದ್ದು ಸದರಿ ಅಧಿಕಾರಿಗಳ ಸಲಹೆ ಸೂಚನೆಗಳನ್ವಯ ಅಗತ್ಯ ಕ್ರಮಗಳನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ.

ಸಂಸ್ಥೆಯು ಹೂಡಿಕೆದಾರರ ಹಣಕ್ಕೆ ಸೂಕ್ತ ಭದ್ರತೆಯನ್ನು ನೀಡುವುದರ ಜೊತೆಗೆ ಗ್ರಾಹಕರನ್ನು ಉತ್ತೇಜಿಸುವ ಸಲುವಾಗಿ ಹಲವಾರು ಆಕರ್ಷಕ ಬಹುಮಾನ ಯೋಜನೆಗಳನ್ನು ಅಳವಡಿಸಿದೆ. ಪ್ರಸಕ್ತ ಸಾಲಿನಲ್ಲಿ ಚಿಟ್ ಫಂಡ್ ವಿಭಾಗವು ಸುಮಾರು 236 ಕೋಟಿ ರೂಗಳನ್ನು ವ್ಯವಹಾರದ ವಹಿವಾಟಿನಲ್ಲಿ ಹೊಂದಿದ್ದು ರಾಜ್ಯದಲ್ಲೇ ಅತ್ಯುತ್ತಮ ಚಿಟ್ ಫಂಡ್ ಸಂಸ್ಥೆಯೆಂಬ ಹೆಗ್ಗಳಿಕೆ ಪಾತ್ರವಾಗಿ ಅಭಿವೃದ್ಧಿ ಪತದತ್ತ ದಾಪುಗಾಲು ಇಡುತ್ತಿದೆ. ಸಂಸ್ಥೆಯು 2018–19ನೇ 243 ಕೊಟಿ ರೂಗಳ ವಹಿವಾಟನ್ನು ನಡೆಸುವ ಗುರಿಯನ್ನು ಹೊಂದಿದ್ದು, ಸದರಿ ಸಾಲಿನಲ್ಲಿ ಯಶಸ್ವಿಯಾಗಿ ಗುರಿಯನ್ನು ಸಾಧಿಸಿರುತ್ತದೆ. 2019–20ನೇ ಸಾಲಿಗೆ 300 ಕೊಟಿ ರೂಗಳ ವಹಿವಾಟನ್ನು ನಡೆಸುವ ಗುರಿಯನ್ನು ಹೊಂದಿದ್ದು ಸಂಪೂರ್ಣ ಗುರಿಯನ್ನು ಸಾಧಿಸುವಲ್ಲಿ ಕಾರ್ಯೋನ್ಮುಕವಾಗಿರುತ್ತದೆ.